**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10038/2021**

ಪಿಡಬ್ಲೂ-13

ಸಿಡಬ್ಲೂ-17

| | | |
|---|---|---|
| ಸಾಕ್ಷಿ ಹೆಸರು | - | ಶಂಕರಗೌಡ ಪಾಟೀಲ್ |
| ತಂದೆ ಹೆಸರು | - | ಸಿದ್ದಸಿನಗೌಡ |
| ವಯಸ್ಸು | - | 34 ವರ್ಷ |
| ಉದ್ಯೋಗ | - | ಪಿ ಎಸ್ ಐ , ಹಾವೇರಿ |
| ವಾಸಃ | - | ಹಾವೇರಿ |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 27-06-2024**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನಾನು ಸೊರಬ ಪೋಲೀಸ್ ಠಾಣೆಯಲ್ಲಿ ದಿನಾಂಕಃ 22-06-2019 ರಿಂದ ದಿಃ 21-08-2019 ರ ವರೆಗೆ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ24-06-2019 ರಂದು ಎ ಎಸ್ ಐ ರವರಿಂದ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದಿರುತ್ತೇನೆ. ದಿಃ28-06-2019 ರಂದು ಫ್ರಾ ಸಾ -1 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಸೆಕ್ಷನ್ 307 ಐ ಪಿ ಸಿ ಯನ್ನು ದಾಖಲು ಮಾಡಿಕೊಳ್ಳಲು ನ್ಯಾಯಾಲಯದ ಅನುಮತಿ ಕೋರಿರುತ್ತೇನೆ ನಂತರ ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿರುತ್ತೇನೆ. ನ್ಯಾಯಾಲಯದಿಂದ ಪಡೆದ ಅನುಮತಿಯನ್ನು ಅದನ್ನು ನಿ ಪಿ -17 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-17 (ಎ) ಎಂದು ಗುರುತಿಸಲಾಯಿತು.

ದಿನಾಕಂಃ 20-07-2019 ರಂದು ಈ ಪ್ರಕರಣದ 9 ನೇ ಆರೋಪಿಯಾದ ಮಳ್ಳಿ ಲಕ್ಷ್ಮಣ ಈತನನ್ನು ಶಿಕಾರಿಪುರದ ಬಸ್ ನಿಲ್ದಾಣದ ಹತ್ತಿರ ವಶಕ್ಕೆ ಪಡೆದು ಆತನನ್ನು ಠಾಣೆಗೆ ಕರೆದುಕೊಂಡು ಬಂದು ದಸ್ತಗಿರಿ ಕ್ರಮ ಅನುಸರಿಸಿ ಮಾನ್ಯ ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ. 9 ನೇ ಆರೋಪಿಯನ್ನು ನೋಡಿದರೆ ಗುರುತಿಸಬಹುದು. ಸಾಕ್ಷಿಯು 9 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಃ 21-07-2019 ರಂದು ಪ್ರಕರಣದ ಉಳಿದ ಆರೋಪಿತರಾದ 2 ರಿಂದ 8 ರವರಿಗೆ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 21-08-2019 ರಂದು ನನಗೆ ವರ್ಗಾವಣೆ ಆಗಿದ್ದರಿಂದ ಎ ಎಸ್ ಐ ಚೆನ್ನಪ್ಪ ರವರಿಗೆ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ. 2 ರಿಂದ 8 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರಾದ 2 ರಿಂದ 8 ರವರು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).